1) ಮಸೂದೆಗಳ ಕುರಿತು ತಪ್ಪಾದ ಹೇಳಿಕೆಗಳನ್ನು ಗುರುತಿಸಿ.
ಎ) ಹಣಕಾಸು ಮಸೂದೆಯು ಒಂದು ವಿತ್ತ ಮಸೂದೆಯಾಗಿದೆ.
ಬಿ) ವಿತ್ತ ಮಸೂದೆ(I) ಹಣಕಾಸು ಮಸೂದೆ ರೀತಿ ಇರುವ ಮಸೂದೆಯಾಗಿದೆ.
ಸಿ) ಹಣಕಾಸು ಮಸೂದೆ ಮತ್ತು ವಿತ್ತ ಮಸೂದೆ (I) ನ್ನು ಕೇವಲ ಲೋಕಸಭೆಯಲ್ಲಿ ಮಾತ್ರ ಪರಿಚಯಿಸಬಹುದು.
ಡಿ) ವಿತ್ತ ಮಸೂದೆ(II) ರಾಷ್ಟ್ರಪತಿಗಳ ಶಿಫಾರಸ್ಸಿನ ಮೇರೆಗೆ ಪರಿಚಯಿಸಲ್ಪಡಬೇಕು.

2) "ಶಕ್ತಿಶಾಲಿ ಕೇಂದ್ರವುಳ್ಳ ಒಕ್ಕೂಟ ವ್ಯವಸ್ಥೆ" ಹಾಗೂ ಶೇಷಾಧಿಕಾರಗಳು ಕೇಂದ್ರ ಸರ್ಕಾರಕ್ಕೆ ನೀಡುವ ಉಪಬಂಧಗಳನ್ನು ಯಾವ ದೇಶದಿಂದ ಎರವಲು ಪಡೆಯಲಾಗಿದೆ?
ಎ) ಅಮೆರಿಕಾ ಸಂವಿಧಾನ
ಬಿ) ಕೆನಡಾ ಸಂವಿಧಾನ
ಸಿ) ಫ್ರಾನ್ಸ್ ಸಂವಿಧಾನ ಡಿ) ಜಪಾನ್ ಸಂವಿಧಾನ

3) ರಾಷ್ಟ್ರೀಯ ತುರ್ತು ಪರಿಸ್ಥಿತಿಯು ಕೆಳಗಿನ ಯಾವುದರ ಮೇಲೆ ಪರಿಣಾಮ ಬೀರುತ್ತದೆ?
1. ಮೂಲಭೂತ ಹಕ್ಕುಗಳು
2. ಲೋಕಸಭೆ ಅಧಿಕಾರಾವಧಿ
3. ಕೇಂದ್ರ & ರಾಜ್ಯ ಸಂಬಂಧಗಳು

ಆಯ್ಕೆಗಳು :
ಎ) 1 & 2 ಮಾತ್ರ ಬಿ) 2 & 3 ಮಾತ್ರ
ಸಿ) 1, 2 & 3 ಮಾತ್ರ ಡಿ) 1 & 3 ಮಾತ್ರ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
D Square, 1st ಮಹಡಿ ... ಆಸ್ಪತ್ರೆ ಹತ್ತಿರ
... ಬಾವಿ, ಧಾರವಾಡ-580001
Ph: 7022471511, 7022473611

4) ಗ್ರಾಮ ಪಂಚಾಯಿತಿಗಳ ಆದಾಯದ ಮೂಲ ಯಾವುದು?
ಎ) ಆಸ್ತಿ, ಭೂಮಿ, ಸರಕು & ಜಾನುವಾರುಗಳ ಮೇಲಿನ ತೆರಿಗೆ
ಬಿ) ರಾಜ್ಯ ಸರ್ಕಾರದ ಅನುದಾನಗಳು
ಸಿ) ಭೂಕಂದಾಯ ಡಿ) ಎ, ಬಿ & ಸಿ

5) "ಬನಿಥಾನಿ" ಚಿತ್ರಕಲೆ ............ ಸಂಬಂಧಿಸಿದೆ.
ಎ) ಬುಂಡಿ ಶಾಲೆ ಬಿ) ಜೈಪುರ ಶಾಲೆ
ಸಿ) ಕಾಂಗ್ರಾ ಶಾಲೆ ಡಿ) ಕಿಶನ್‌ಗರ್ ಶಾಲೆ

6) ಕೆಳಗಿನವುಗಳಲ್ಲಿ ತಪ್ಪಾದ ಜೋಡಣೆಗಳನ್ನು ಗುರ್ತಿಸಿ.
ಎ) ಬಮ್ ಲಾ – ಅರುಣಾಚಲ ಪ್ರದೇಶ – ಟಿಬೆಟ್‌ನ ನಡುವೆ ಸಂಪರ್ಕ
ಬಿ) ನಾಥುಲಾ – ನೇಪಾಳ & ಸಿಕ್ಕಿಂಗಳ ನಡುವಿನ ಪರ್ವತ ದಾರಿ
ಸಿ) ಲಿಪುಲೇಖ್ ಪಾಸ್ – ಭಾರತ & ಚೀನಾ ಸರಹದ್ದಿನ ಟಿಬೆಟ್ ನಡುವಿನ ಸಂಪರ್ಕ
ಡಿ) ಶಿಪ್ಕಿಲಾ – ಹಿಮಾಚಲ ಪ್ರದೇಶದಲ್ಲಿದೆ.

7) "ಗಲ್ಫ್ ಆಫ್ ಬೋತ್ನಿಯಾ" ಯಾವ ದೇಶಗಳ ನಡುವೆ ಕಂಡುಬರುತ್ತದೆ?
ಎ) ಟರ್ಕಿ & ಗ್ರೀಸ್ ಬಿ) ಜಪಾನ್ & ರಷ್ಯಾ
ಸಿ) ಸ್ವೀಡನ್ & ಫಿನ್‌ಲ್ಯಾಂಡ್
ಡಿ) ಬ್ರಿಟನ್ & ಯುರೋಪ್

8) ಜಂಬಿಟ್ಟಿಗೆ ಮಣ್ಣಿನ ಕುರಿತಾದ ತಪ್ಪಾದ ಹೇಳಿಕೆಯನ್ನು ಗುರ್ತಿಸಿ.
ಎ) ಹೆಚ್ಚು ಉಷ್ಣತೆ & ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ರೂಪುಗೊಂಡಿದೆ.
ಬಿ) ಉಷ್ಣವಲಯದ ಮಳೆಯ ಕಾರಣ ಲೀಚಿಂಗ್‌ಗೆ ಒಳಗಾಗಿರುತ್ತದೆ.
ಸಿ) ಕೃಷಿ ಯೋಗ್ಯವಾಗಿಸಲು ರಸಗೊಬ್ಬರಗಳ ಬಳಕೆ ಅವಶ್ಯ
ಡಿ) ಕೆಂಪು ಜಂಬಿಟ್ಟಿಗೆ ಮಣ್ಣು ಗೋಡಂಬಿ ಬೆಳೆಗೆ ಸೂಕ್ತವಾಗಿದೆ.

9) "ಟ್ರಕ್ ಫಾರ್ಮಿಂಗ್" ಕೆಳಗಿನ ಯಾವ ಬೆಳೆ ಬೆಳೆಯುವ ಪ್ರದೇಶದಲ್ಲಿ ಸಾಮಾನ್ಯವಾಗಿದೆ?
ಎ) ಹತ್ತಿ ಬಿ) ತರಕಾರಿಗಳು
ಸಿ) ಹೂಗಳು ಡಿ) ಹಣ್ಣುಗಳು

10) ಕೆಳಗಿನ ಯಾವ ದೇಶವು ಕಪ್ಪು ಸಮುದ್ರದೊಡನೆ ಗಡಿ ಹಂಚಿಕೊಂಡಿಲ್ಲ?
ಎ) ಬಲ್ಗೇರಿಯಾ ಬಿ) ಜಾರ್ಜಿಯಾ
ಸಿ) ರೋಮೇನಿಯಾ ಡಿ) ಗ್ರೀಸ್

11) ನಾವು ಕೆಳಗಿನ ಯಾವ ಪ್ರದೇಶದಿಂದ ಯಾವ ಪ್ರದೇಶದೆಡೆಗೆ ಹೋಗುವಾಗ ಮಳೆ ಹೆಚ್ಚಾಗುತ್ತಾ ಹೋಗುತ್ತದೆ?
ಎ) ಕೆಳ ಎತ್ತರದಿಂದ ಹೆಚ್ಚಿನ ಎತ್ತರದ ಪ್ರದೇಶಕ್ಕೆ ಹೋಗುವಾಗ
ಬಿ) ಕರಾವಳಿ ತೀರದಿಂದ ಒಳನಾಡಿನ ಕಡೆ ಹೋಗುವಾಗ
ಸಿ) ಧ್ರುವ ಪ್ರದೇಶದಿಂದ ಭೂ ಮಧ್ಯೆ ಪ್ರದೇಶದೆಡೆಗೆ ಹೋಗುವಾಗ
ಡಿ) ಮೇಲಿನ ಎಲ್ಲವೂ

12) ಗಾಂಧೀಜಿಯವರ ಹೆಸರಿಗೆ "ಮಹಾತ್ಮ" ಎಂಬುದು ಸೇರಿಕೊಂಡ ಸಂದರ್ಭ ಯಾವುದು?
ಎ) ದಂಡಿಯಾತ್ರೆ ಬಿ) ಪೂನಾ ಒಪ್ಪಂದ
ಸಿ) ಖಿಲಾಫತ್ ಚಳುವಳಿ
ಡಿ) ಚಂಪಾರಣ್ ಸತ್ಯಾಗ್ರಹ

13) "ಕರ್ಣಾಟ ಬಲ" ಎಂದು ಪ್ರಸಿದ್ಧಿ ಪಡೆದ ಸೈನ್ಯವನ್ನು ಹೊಂದಿದ್ದ ರಾಜವಂಶ ಯಾವುದು?
ಎ) ಗಂಗರು ಬಿ) ಕದಂಬರು
ಸಿ) ಹೊಯ್ಸಳರು ಡಿ) ಬಾದಾಮಿ ಚಾಲುಕ್ಯರು

14) ಚಾಲುಕ್ಯ ವಿಕ್ರಮಶಕೆ ಆರಂಭವಾದ ವರ್ಷ ಯಾವುದು?
ಎ) ಕ್ರಿ.ಶ. 78 ಬಿ) ಕ್ರಿ.ಶ. 314
ಸಿ) ಕ್ರಿ.ಶ. 876 ಡಿ) ಕ್ರಿ.ಶ. 1076

15) ರಾಜ್ಯವನ್ನು ಆಡಳಿತ ವ್ಯವಸ್ಥೆಗಾಗಿ ನಾಡುಗಳಾಗಿ, ತೊರೆ ನಾಡು, ಅಸಂಡಿ ನಾಡುಗಳಾಗಿ ವಿಭಜಿಸಿದವರಾರು?
ಎ) ಕದಂಬರು ಬಿ) ಗಂಗರು
ಸಿ) ರಾಷ್ಟ್ರಕೂಟರು ಡಿ) ಹೊಯ್ಸಳರು



Scanned with CamScanner

www.shikarat.com



16) ಬಾದಾಮಿ ಚಾಲುಕ್ಯರ ರಾಜ ಲಾಂಛನ ಯಾವುದು?
ಎ) ನಂದಿ ಬಿ) ವರಾಹ
ಸಿ) ಗರುಡ ಡಿ) ಸಿಂಹ

17) ವಿಷ್ಣುವರ್ಧನನ ಪತ್ನಿ ಶಾಂತಲೆ "ನಾಟ್ಯಕ್ಕಾಗಿಯೇ ಮೈತಳೆದು ಅವತರಿಸಿದಳೇನೋ" ಎಂಬುದಾಗಿ ವರ್ಣಿಸಲಾಗಿರುವ ಶಾಸನ ಯಾವುದು?
ಎ) ಬೇಲೂರು ಶಾಸನ
ಬಿ) ಸಿಂದಿಗೆರೆ ಶಾಸನ
ಸಿ) ಶ್ರವಣ ಬೆಳಗೊಳ ಶಾಸನ
ಡಿ) ಬಾಣಾವರ ಶಾಸನ

18) ಈ ಕೆಳಗಿನ ಯಾವುದರಿಂದ ನೇರ ವಿದ್ಯುತ್ಪ್ರವಾಹ (Direct Current) ವನ್ನು ನಿಯಂತ್ರಿಸಲಾಗುತ್ತದೆ?
ಎ) ಕೆಪಾಸಿಟರ್ಸ್ ಬಿ) ರೆಸಿಸ್ಟೆನ್ಸ್
ಸಿ) ಇಂಡೆಕ್ಟನ್ಸ್ ಡಿ) ಇಂಪಿಡೆನ್ಸ್

19) ಟ್ಯೂಬ್‌ಲೈಟ್‌ಗಳಲ್ಲಿ ಈ ಕೆಳಗಿನ ಯಾವುದರ ಆವಿ ಇರುತ್ತದೆ?
ಎ) ನಿಯಾನ್ ಬಿ) ಸೋಡಿಯಂ
ಸಿ) ಟಂಗ್‌ಸ್ಟನ್ ಡಿ) ಪಾದರಸ

20) ಸಮತಲ ದರ್ಪಣದಲ್ಲಿ ( Plane Mirror) ವ್ಯಕ್ತಿಯ ಪೂರ್ಣ ಪ್ರತಿಬಿಂಬವನ್ನು ಕಾಣಬೇಕಾದರೆ ಆ ದರ್ಪಣ ವ್ಯಕ್ತಿಯ ಎತ್ತರದ ಎಷ್ಟರಷ್ಟಿರಬೇಕು?
ಎ) ವ್ಯಕ್ತಿಯ ಅರ್ಧಭಾಗ
ಬಿ) ವ್ಯಕ್ತಿಯ ಕಾಲುಭಾಗ
ಸಿ) ವ್ಯಕ್ತಿಯ ಪೂರ್ತಿ ಭಾಗ
ಡಿ) ಯಾವುದು ಅಲ್ಲ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
ಮೊ: 7022471511, 7022473611

21) ಸೋಲಾರ್ ಕುಕ್ಕರ್‌ಗಳಲ್ಲಿ ಆಹಾರ ಬಿಸಿಯಾಗುವುದಕ್ಕೆ ಕಾರಣವಾಗುವ ಕಿರಣ ಯಾವುದು?
ಎ) ನೇರಳಾತೀತ ಕಿರಣ ಬಿ) ಅವಗೆಂಪು ಕಿರಣ
ಸಿ) ಕಾಸ್ಮಿಕ್ ಕಿರಣ ಡಿ) ಗಾಮಾ ಕಿರಣ

22) ಕೆಳಗಿನ ಯಾವ ಉಷ್ಣತೆಯಲ್ಲಿ ಪಾದರಸವು ಸೂಪರ್ ಕಂಡಕ್ಟರ್ ಆಗಿ ಪರಿವರ್ತನೆ ಹೊಂದುತ್ತದೆ?
ಎ) $169^0$ ಸೆ. ಬಿ) $-169^0$ ಸೆ.
ಸಿ) $269^0$ ಸೆ. ಡಿ) $-269^0$ ಸೆ.

23) ದ್ರವವು ಒತ್ತಡವನ್ನು ಎಲ್ಲಾ ದಿಕ್ಕುಗಳಲ್ಲಿಯೂ ಸಮನಾಗಿ ಹರಡುವುದು. ಈ ನಿಯಮವನ್ನು ಪ್ರತಿಪಾದಿಸಿದವರಾರು?
ಎ) ಜೂಲ್-ಥಾಮಸ್ ಬಿ) ಪ್ಯಾಸ್ಕಲ್
ಸಿ) ಅವೋಗೊಡ್ರೋ ಡಿ) ವಂಡರ್ ವಾಲ್ಸ್

24) ನಿಯಮಿತ ಕಾಲಾಂತರದಲ್ಲಿ ರೇಡಿಯೋ ಅಲೆಗಳನ್ನು ಹೊರ ಹೊಮ್ಮಿಸುವ ಆಕಾಶಕಾಯ ಯಾವುದು?
ಎ) ಕ್ವಾಸಾರ್ ಬಿ) ಶ್ವೇತ ಕುಬ್ಜ
ಸಿ) ರೆಡ್‌ಜೆಂಟ್ ಡಿ) ಪಲ್ಸಾರ್

25) NATO ಕುರಿತ ಸರಿಯಾದ ಹೇಳಿಕೆ ಗುರ್ತಿಸಿ.
1. 1949ರ ಏಪ್ರಿಲ್ 4 ರಂದು ರಚನೆ.
2. ಮುಖ್ಯ ಕಛೇರಿ – ಬೆಲ್ಜಿಯಂನ ಬ್ರುಸೆಲ್ಸ್‌ನಲ್ಲಿದೆ.
3. ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ – 30.
4. ಯುರೋಪ್‌ನ 28, ಉತ್ತರ ಅಮೆರಿಕಾದ ಒಂದು ರಾಷ್ಟ್ರ & ದ. ಅಮೆರಿಕಾದ ಒಂದು ರಾಷ್ಟ್ರಗಳ ಇದರ ಸದಸ್ಯ ರಾಷ್ಟ್ರಗಳಾಗಿವೆ.

ಆಯ್ಕೆಗಳು :
ಎ) 1, 2 & 3 ಬಿ) 2, 3 & 4
ಸಿ) 1, 2, 3 & 4 ಡಿ) 1, 3 & 4

26) ಕೆಳಗಿನ ಯಾವ ಸಮಿತಿ ಹಣಕಾಸು ವಲಯದ ಸುಧಾರಣೆಗಳನ್ನು ಪರಿಶೀಲಿಸಿ, ಶಿಫಾರಸ್ಸುಗಳನ್ನು ಸೂಚಿಸಿದವು?
ಎ) ಅಬಿದ್ ಹುಸೇನ್ ಸಮಿತಿ
ಬಿ) ಭಾಗವತಿ ಸಮಿತಿ
ಸಿ) ಚೆಲ್ಲಯ್ಯ ಸಮಿತಿ ಡಿ) ನರಸಿಂಹನ್ ಸಮಿತಿ

27) ನಾಲ್ಕು ಜನ ಕೆಲಸ ಮಾಡುವ ಸ್ಥಳದಲ್ಲಿ ಎಂಟು ಜನ ಕೆಲಸ ಮಾಡಿದರೆ ಅಲ್ಲಿ ಇರುವ ನಿರುದ್ಯೋಗ ?
ಎ) ಮುಕ್ತ ನಿರುದ್ಯೋಗ ಬಿ) ಅರೆ ನಿರುದ್ಯೋಗ
ಸಿ) ಘರ್ಷಣಾತ್ಮಕ ನಿರುದ್ಯೋಗ
ಡಿ) ಮರೆಮಾಚಿದ ನಿರುದ್ಯೋಗ

28) ಕಂಪೆನಿಯ ಡಿಬೆಂಚುದಾರರೆಂದರೆ ಕಂಪೆನಿಯ.............?
ಎ) ಷೇರುದಾರರು ಬಿ) ಸಾಲಕೊಟ್ಟವರು
ಸಿ) ಸಾಲಗಾರರು ಡಿ) ನಿರ್ದೇಶಕರು

29) " SICA" ದ ವಿಸ್ತೃತ ರೂಪ?
ಎ) Small Industries Companies Association
ಬಿ) Sick Industries Combined Association
ಸಿ) Sick Industries Companies Act
ಡಿ) ಯಾವುದು ಅಲ್ಲ

30) 2011ರ ಜನಗಣತಿಯ ಪ್ರಕಾರ ಯಾವ ರಾಜ್ಯದಲ್ಲಿ ಮಕ್ಕಳ ಲಿಂಗಾನುಪಾತ ಕಡಿಮೆಯಿದೆ?
ಎ) ಅರುಣಾಚಲ ಪ್ರದೇಶ
ಬಿ) ಬಿಹಾರ
ಸಿ) ಹರಿಯಾಣಾ ಡಿ) ರಾಜಸ್ಥಾನ



Scanned with CamScanner

www.shikarat.com



31) ಕೆಳಗಿನವುಗಳಲ್ಲಿ ಯಾವುದು ಯುನೆಸ್ಕೋ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಲ್ಲ?
ಎ) ಹಂಪಿ ಬಿ) ಪಟ್ಟದ ಕಲ್ಲು
ಸಿ) ಪಶ್ಚಿಮ ಘಟ್ಟಗಳು ಡಿ) ಹಳೇಬೀಡು

32) ಈ ಕೆಳಗಿನವರಲ್ಲಿ ಭಾರತದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಮುಖ್ಯಸ್ಥರು ಯಾರಾಗಿರುತ್ತಾರೆ?
ಎ) ರಾಷ್ಟ್ರಪತಿ ಬಿ) ಪ್ರಧಾನಮಂತ್ರಿ
ಸಿ) ಕ್ಯಾಬಿನೆಟ್ ಕಾರ್ಯದರ್ಶಿ
ಡಿ) ಪರಿಸರ, ಅರಣ್ಯ & ಹವಾಮಾನ ಇಲಾಖೆ ಸಚಿವರು

33) ಕೆಳಗಿನ ಯಾವ ಪ್ರಾಚೀನ ಲೇಖಕರು ಭಾರತಕ್ಕೆ ಚಿನ್ನವು ಹರಿದು ಹೋಗುತ್ತಿರುವ ಕುರಿತು ಆರೋಪಿಸಿದ್ದಾರೆ?
ಎ) ಟಾಲೆಮಿ ಬಿ) ಸೀರೋ
ಸಿ) ಸ್ಟ್ರಾಬೋ ಡಿ) ಪ್ಲಿನಿ

34) ಸಮವರ್ತಿ ಪಟ್ಟಿ ಮೇಲಿನ ವಿಷಯಗಳ ಕುರಿತು ಸರಿಯಾದ ಹೇಳಿಕೆಯನ್ನು ಗುರ್ತಿಸಿ.
ಎ) ಸಮವರ್ತಿ ಪಟ್ಟಿ & ರಾಜ್ಯ ಪಟ್ಟಿಗಳ ನಡುವೆ ಸಂಘರ್ಷ ಏರ್ಪಟ್ಟಾಗ ರಾಜ್ಯ ಪಟ್ಟಿಯೇ ಪ್ರಮುಖವಾಗುತ್ತದೆ.
ಬಿ) ಸಮವರ್ತಿ ಪಟ್ಟಿ ವಿಷಯದ ಮೇಲಿನ ಕೇಂದ್ರ & ರಾಜ್ಯ ಕಾನೂನುಗಳಲ್ಲಿ ರಾಜ್ಯದ ಶಾಸನ ಮೇಲುಗೈಯಾಗುವುದು.
ಸಿ) 1935ರ ಭಾರತ ಸರ್ಕಾರದ ಕಾಯ್ದೆಯು ಸಮವರ್ತಿ ಪಟ್ಟಿಯುಳ್ಳ 3 ಪಟ್ಟಿಗಳಾಗಿ ವಿಷಯಗಳನ್ನು ವಿಂಗಡಿಸಿತು.
ಡಿ) ಸಮವರ್ತಿ ಪಟ್ಟಿ & ಕೇಂದ್ರ ಪಟ್ಟಿ ನಡುವೆ ಸಂಘರ್ಷವುಂಟಾದಾಗ ಸಮವರ್ತಿ ಪಟ್ಟಿಯೇ ಮೇಲುಗೈಯಾಗುತ್ತದೆ.

35) ಕೇಂದ್ರ ಚುನಾವಣಾ ಆಯೋಗವು ಕೆಳಗಿನ ಯಾವ ಸಂಸ್ಥೆಗಳಿಗೆ / ಘಟಕಗಳಿಗೆ ಚುನಾವಣೆ ನಡೆಸುವುದಿಲ್ಲ?
ಎ) ರಾಷ್ಟ್ರಪತಿ & ಉಪರಾಷ್ಟ್ರಪತಿ
ಬಿ) ಸಂಸತ್ತು
ಸಿ) ರಾಜ್ಯ ವಿಧಾನಸಭೆ
ಡಿ) ಪಂಚಾಯಿತಿ & ಮುನ್ಸಿಪಾಲಿಟಿಗಳು

36) ಹಣಕಾಸು ಮಸೂದೆ ಕುರಿತು ತಪ್ಪಾದ ಹೇಳಿಕೆ ಗುರ್ತಿಸಿ.
ಎ) ಸಂಸತ್‌ನ ಯಾವುದೇ ಸದನದಲ್ಲಿ ಮಂಡಿಸಬಹುದು.
ಬಿ) ಹಣಕಾಸು ಮಸೂದೆಯಲ್ಲಿ ತಿದ್ದುಪಡಿಯಾಗಿ ಮುಂಚಿತವಾಗಿದ್ದಂತೆ ಇರದೆ ಬದಲಾಗಿದ್ದರೆ ರಾಷ್ಟ್ರಪತಿಗಳು ಲೋಕಸಭೆಗೆ ಹಿಂದಿರುಗಿಸಬಹುದು.
ಸಿ) ರಾಜ್ಯ ಸಭೆ ಗರಿಷ್ಠ 14 ದಿನಗಳ ಕಾಲ ತಡೆಹಿಡಿಯಬಹುದು.
ಡಿ) ಮಸೂದೆಯು ಹಣಕಾಸು ಮಸೂದೆಯೆಂದು ಸ್ಪೀಕರ್ ನಿರ್ಧರಿಸುತ್ತಾರೆ.

37) ಕೆಳಗಿನವುಗಳಲ್ಲಿ ಯಾವುದು ಸಹಕಾರ ಒಕ್ಕೂಟ ವ್ಯವಸ್ಥೆಗೆ (Cooperative Federation) ತದ್ವಿರುದ್ಧವಾಗಿದೆ?
ಎ) ಅಂತರರಾಜ್ಯ ಆಯೋಗ
ಬಿ) ಕೇಂದ್ರ ಲೋಕಸೇವಾ ಆಯೋಗ
ಸಿ) ರಾಜ್ಯ ಸಭೆ
ಡಿ) ಜಿಎಸ್‌ಟಿ ಕೌನ್ಸಿಲ್

38) ಮಿಯಾಸಿಸ್ ಕೆಳಗಿನ ಯಾವುದರ ಕಾರಣ ಪ್ರಾಮುಖ್ಯತೆ ಪಡೆದುಕೊಂಡಿದೆ?
ಎ) ಕ್ರೋಮೋಸೋಮ್‌ಗಳನ್ನು ದ್ವಿಗುಣಗೊಳಿಸುವುದರಿಂದ
ಬಿ) ವಂಶಾವಳಿಯಲ್ಲಿ ಬದಲಾವಣೆ ತರುವುದರಿಂದ
ಸಿ) ಜೀವಕೋಶಗಳ ಸುಸ್ಥಿತಿ ಕಾಪಾಡುವುದರಿಂದ
ಡಿ) ಬಿ & ಸಿ ಗಳೆರಡೂ

39) ಕೆಳಗಿನವುಗಳಲ್ಲಿ ಯಾವುದು ಓಝೋನ್ ಹಾನಿ ಮಾಡುವ ಹಾನಿಕಾರಕವಲ್ಲ?
ಎ) ಕ್ಲೋರೋ ಫ್ಲ್ಯೂರೋ ಕಾರ್ಬನ್
ಬಿ) ನೈಟ್ರೋಜನ್ ಆಕ್ಸೈಡ್
ಸಿ) ಸಲ್ಫರ್ ಆಕ್ಸೈಡ್ ಡಿ) ಹೈಡ್ರೋಫ್ಲೋರೋ ಕಾರ್ಬನ್

40) ನಿಂಬೆ ಗಿಡದ ಹೂವಿನ ಬಣ್ಣ ಯಾವುದು?
ಎ) ಹಸಿರು ಬಿ) ಹಳದಿ
ಸಿ) ಬಿಳಿ ಡಿ) ಯಾವುದು ಅಲ್ಲ

41) ವಿಶ್ವ ಆರೋಗ್ಯ ಸಂಸ್ಥೆಯ ಶಿಫಾರಸ್ಸಿನಂತೆ ಮಾನವನ ಕಿವಿಗಳಿಗೆ ಎಷ್ಟು ಡೆಸಿಬಲ್‌ನ ಶಬ್ದ ಉತ್ತಮ ಎಂದು ಹೇಳಿದೆ?
ಎ) 90 ಡೆಸಿಬಲ್ ಬಿ) 45 ಡೆಸಿಬಲ್
ಸಿ) 60 ಡೆಸಿಬಲ್ ಡಿ) 80 ಡೆಸಿಬಲ್

42) ಕೆಳಗಿನವುಗಳಲ್ಲಿ ಯಾವುದನ್ನು ವುಡ್‌ಸ್ಪಿರಿಟ್ ಎಂದು ಕರೆಯಲಾಗುತ್ತದೆ?
ಎ) ಮೆಥಾನಲ್ ಬಿ) ಈಥನಾಲ್
ಸಿ) ಫಾರ್ಮಾಲ್ಡಿಹೈಡ್ ಡಿ) ಅಸಿಟಾಲ್ಡಿಹೈಡ್

43) ಹೊಂದಿಸಿ ಬರೆಯಿರಿ.

| ಅಣುವಿದ್ಯುತ್ ಸ್ಥಾವರ | ರಾಜ್ಯ |
|---|---|
| P. ತಾರಾಪುರ | 1. ತಮಿಳುನಾಡು |
| Q. ನರೋರಾ | 2. ಗುಜರಾತ್ |
| R. ಕಕ್ರಪಾಕ | 3. ಮಹಾರಾಷ್ಟ್ರ |
| S. ಕಲ್ಪಕಂ | 4. ಉತ್ತರ ಪ್ರದೇಶ |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 1 | 2 | 3 | 4 |
| ಬಿ) | 3 | 4 | 2 | 1 |
| ಸಿ) | 4 | 1 | 2 | 3 |
| ಡಿ) | 2 | 1 | 3 | 4 |

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
JD Square, 1ನೇ ಮಹಡಿ ಸ್ಟಂಡಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
ಮೊ: 7022471511, 7022473611

44) ಪೆಲ್ಲಾಗ್ರ ಕಾಯಿಲೆಯು ಯಾವುದರ ಕೊರತೆಯಿಂದ ಬರುತ್ತದೆ?
ಎ) ನಿಯಾಸಿನ್ ಬಿ) ಬಯೋಟಿನ್
ಸಿ) ಪೈರಿಡಾಕ್ಸಿನ್ ಡಿ) ಯಾವುದು ಅಲ್ಲ

45) ಕೆಳಗಿನವುಗಳಲ್ಲಿ ಯಾವುದು ಅರೆವಾಹಕ ಅಲ್ಲ?
ಎ) ಜರ್ಮೇನಿಯಂ
ಬಿ) ಸಿಲಿಕಾನ್ ಸಿ) ಗ್ಯಾಲಿಯಂ ಆರ್ಸೆನೈಡ್
ಡಿ) ಅಲ್ಯೂಮಿನಿಯಂ



Scanned with CamScanner

www.shikarat.com

SHIKARAT.COM
Online Education

## For more contact us

**Instagram**
https://www.instagram.com/shikarat_com/

**Telegram**
https://telegram.me/shikarat

**Facebook**
https://www.facebook.com/shikarat/

**Twitter**
https://twitter.com/Shikarat_com

**Pinterest**
https://in.pinterest.com/shikarat_com/

**Website**
www.shikarat.com

**Email**
Admin@shikarat.com

SHIKARAT.COM
Online Education

❤️ **Sharing is Caring** ❤️

😍**If it is helpful Please Share with your friends**😍

9742928829

www.shikarat.com



46) ಕಬ್ಬಿಣ & ಉಕ್ಕಿನ ಕೈಗಾರಿಕೆಯನ್ನು ಏನೆಂದು ಕರೆಯುತ್ತಾರೆ?
ಎ) ದ್ವಿತೀಯ ಕೈಗಾರಿಕೆ ಬಿ) ಮೂಲ ಕೈಗಾರಿಕೆ
ಸಿ) ರಫ್ತು ಕೈಗಾರಿಕೆ ಡಿ) ದೇಶೀಯ ಕೈಗಾರಿಕೆ

47) ಕರ್ನಾಟಕ ಲೋಕಾಯುಕ್ತ ಕಾಯ್ದೆ ಜಾರಿಯಾದದ್ದು?
ಎ) 1984 ಬಿ) 1986
ಸಿ) 1990 ಡಿ) 1992

48) ಸಗಟು ಬೆಲೆ ಸೂಚ್ಯಂಕದ ಅಂಕಿ – ಅಂಶಗಳನ್ನು ಬಿಡುಗಡೆ ಮಾಡುವವರು?
ಎ) Ministry of Statistics & Programme Implementation
ಬಿ) Ministry of Home Affairs
ಸಿ) Ministry of Finance
ಡಿ) Ministry of Commerce & Industry

49) ಕೆಳಗಿನ ಯಾರನ್ನು ಪಾಲಿ ಭಾಷೆಯ ಪಠ್ಯ ಪುಸ್ತಕಗಳಲ್ಲಿ " ನಿಘಂಟ ನಟಪುಟ್ಟ" ಎಂದು ಕರೆಯಲಾಗಿದೆ?
ಎ) ಗೌತಮ ಬುದ್ಧ ಬಿ) ಮಹಾವೀರ
ಸಿ) ಪಾರ್ಶ್ವನಾಥ ಡಿ) ವೃಷಭನಾಥ

50) ನೌಕಾಯಾನ & ಜಲಚರ ಕೃಷಿಗೆ ಪ್ರಾಮುಖ್ಯತೆ ಪಡೆದಿರುವ ಸಾಗರ ತಳ ಪ್ರದೇಶ ಯಾವುದು?
ಎ) ಆಳಸಾಗರ ಮೈದಾನ ಪ್ರದೇಶ
ಬಿ) ಸಾಗರ ತಗ್ಗು ಪ್ರದೇಶ
ಸಿ) ಖಂಡಾವರಣ ಪ್ರದೇಶ
ಡಿ) ಖಂಡಾವರಣ ಇಳಿಜಾರು ಪ್ರದೇಶ

51) ರಾತ್ರಿಯ ಸಮಯದಲ್ಲಿ ಪರ್ವತದ ಇಳಿಜಾರಿನಲ್ಲಿ ಬೀಸುವ ಶೀತ & ದಟ್ಟವಾದ ಗಾಳಿಯನ್ನು ಹೀಗೆಂದು ಕರೆಯಲಾಗುತ್ತದೆ?
ಎ) ಕಟಬಟಿಕ ಗಾಳಿ ಬಿ) ಹರ್ಮಾಟನ್
ಸಿ) ಖಾಮ್ಸಿನ್ ಡಿ) ಯಾವುದು ಅಲ್ಲ

52) ಕೆಳಗಿನವುಗಳಲ್ಲಿ ಯಾವ ಮೂರು ಬೆಳೆಗಳು ಜಾಗತಿಕ ಆಹಾರ ಉತ್ಪಾದನೆಗೆ ಗರಿಷ್ಠ ಕೊಡುಗೆ ನೀಡಿದ ಬೆಳೆಗಳಾಗಿವೆ?
ಎ) ಗೋಧಿ, ಅಕ್ಕಿ & ಬಾರ್ಲಿ
ಬಿ) ಅಕ್ಕಿ, ಮೆಕ್ಕೆಜೋಳ & ಸರ್ಗಮ್
ಸಿ) ಗೋಧಿ, ಮೆಕ್ಕೆಜೋಳ & ಸರ್ಗಮ್
ಡಿ) ಗೋಧಿ, ಅಕ್ಕಿ & ಮೆಕ್ಕೆಜೋಳ

53) ಹಾಕಿ ಕ್ರೀಡೆಯ ಮೂಲಸ್ಥಾನ ಯಾವುದು?
ಎ) ಫ್ರಾನ್ಸ್ ಬಿ) ಭಾರತ
ಸಿ) ಬೆಲ್ಜಿಯಂ ಡಿ) ಚೀನಾ

54) ಮೀನುಗಾರಿಕೆ ಅಧ್ಯಯನ ಕಾಲೇಜು ಎಲ್ಲಿದೆ?
ಎ) ಮಲ್ಪೆ ಬಿ) ಕಾರವಾರ
ಸಿ) ಮಂಗಳೂರು ಡಿ) ಉಡುಪಿ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಟಂಡಾ... ಹತ್ತಿರ
ಸುಭಾಷ ರಸ್ತೆ, ಧಾರವಾಡ-580001
ಮೊ: 7022471511, 7022473511

55) ಬೆಟ್ಟದ ಅಂತರ್ಯದಲ್ಲಿ (ಗುಹಾಂತರ) ನಿರ್ಮಿತವಾದ ಜಲವಿದ್ಯುತ್ ಯೋಜನೆ ಯಾವುದು?
ಎ) ನಾಗಝರಿ ಬಿ) ಕಾಳಿ
ಸಿ) ವರಾಹಿ ಡಿ) ಕೊಡಸಳ್ಳಿ

56) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಭಾರತವು ಪ್ರಪಂಚದಲ್ಲಿಯೇ ಅತಿಹೆಚ್ಚು ಭಾರಜಲ (Heavy Water) ಉತ್ಪಾದಿಸುವ ದೇಶಗಳಲ್ಲಿ ಒಂದು.
2. ಭಾರತವು ಥೋರಿಯಂನ ಬೃಹತ್ತಾದ ನಿಕ್ಷೇಪಗಳನ್ನು ಹೊಂದಿರುವ ರಾಷ್ಟ್ರವಾಗಿದೆ.

ಸರಿಯಾದ ಹೇಳಿಕೆ ಯಾವುದು?
ಎ) 1 ಮಾತ್ರ ಬಿ) 2 ಮಾತ್ರ
ಸಿ) 1 & 2 ಸರಿ ಡಿ) ಯಾವುದು ಅಲ್ಲ

57) ಭಾರತದಲ್ಲಿನ ಸೌರವೀಕ್ಷಣಾಲಯ ಕೇಂದ್ರಗಳು ಯಾವುವು?
ಎ) ದೆಹಲಿ, ಉಜ್ಜಯಿನಿ, ಕೊಡೈಕೆನಾಲ್
ಬಿ) ದೆಹಲಿ, ಅಜ್ಮೀರ್, ರಾಜ್‌ಗಿರ್
ಸಿ) ಉಜ್ಜೈನಿ, ಮಧ್ಯಪ್ರದೇಶ, ಜಾರ್ಖಂಡ್
ಡಿ) ಮೇಲಿನ ಯಾವುದು ಅಲ್ಲ

58) "Unstoppable - My life so for" ಯಾರ ಕೃತಿಯಾಗಿದೆ?
ಎ) ಕೆವಿನ್ ಪೀಟರ್‌ಸನ್ ಬಿ) ಮರಿಯಾ ಶರಪೋವಾ
ಸಿ) ಸೆರೆನಾ ವಿಲಿಯಮ್ಸ್ ಡಿ) ಉಸೇನ್ ಬೋಲ್ಟ್

59) ಹಿಮಾಚಲ ಪ್ರದೇಶದ ಚಳಿಗಾಲದ ರಾಜಧಾನಿ ಯಾವುದು?
ಎ) ಶಿಮ್ಲಾ ಬಿ) ನೈನಿತಾಲ್
ಸಿ) ಧರ್ಮಶಾಲಾ ಡಿ) ಕಾಂಗ್ರಾ

60) ಸುಸ್ಥಿರ ಅಭಿವೃದ್ಧಿ ಎಂದರೇನು?
ಎ) ಮುಂದಿನ ಜನಾಂಗಗಳ ಅಗತ್ಯಗಳನ್ನು ಕಡೆಗಣಿಸದೆ, ಪ್ರಸ್ತುತ ಜನಾಂಗದ ಅಗತ್ಯಗಳ ಬಗ್ಗೆ ಗಮನ ಹರಿಸುವಂತ/ ಸಂಪನ್ಮೂಲಗಳನ್ನು ಮಿತವಾಗಿ ಬಳಸುವ ಅಭಿವೃದ್ಧಿ
ಬಿ) ಭವಿಷ್ಯತ್ತಿನ ಬಗ್ಗೆ ಚಿಂತಿಸದೆ, ಪ್ರಸ್ತುತ ಜನಾಂಗಕ್ಕೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
ಸಿ) ಗ್ರಾಮೀಣ ಪ್ರದೇಶದ ಜನರಿಗೆ ನಗರದಲ್ಲಿರುವಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
ಡಿ) ಮೇಲಿನ ಎಲ್ಲವೂ ಸರಿ

61) ತದ್ರೂಪ ಸೃಷ್ಟಿ ಎಂದರೇನು?
1. ಅನುವಂಶೀಯವಾಗಿ ಒಂದೇ ತೆರನಾಗಿರುವ ಜೀವಕೋಶಗಳನ್ನು ಅಥವಾ ಜೀವಿಗಳನ್ನು ಒಂದೇ ಮಾತೃಕೋಶದಿಂದ ಪ್ರಯೋಗಾಲಯದ ಸ್ಥಿತಿಯಲ್ಲಿ ಉತ್ಪತ್ತಿ ಮಾಡುವ ಪ್ರಕ್ರಿಯೆ.



Scanned with CamScanner

www.shikarat.com



2. ಅನುವಂಶೀಯವಾಗಿ ಬೇರೆ ಬೇರೆ ತೆರನಾಗಿರುವ ಅಣು/ ಜೀವಕೋಶ/ಜೀವಿಗಳನ್ನು ಒಂದೇ ಮೂತ್ರಕೋಶದಿಂದ ಪ್ರಯೋಗಾಲಯದ ಸ್ಥಿತಿಯಲ್ಲಿ ಉತ್ಪತ್ತಿ ಮಾಡುವ ಪ್ರಕ್ರಿಯೆ.

ಆಯ್ಕೆಗಳು :

ಎ) 1 ಮಾತ್ರ ಬಿ) 2 ಮಾತ್ರ
ಸಿ) 1 & 2 ಸರಿ ಡಿ) ಯಾವುದು ಅಲ್ಲ

62) ಪೆಂಟಾವೇಲೆಂಟ್ ವ್ಯಾಕ್ಸಿನ್‌ಗಳ ಮೂಲಕ ಮಕ್ಕಳಲ್ಲಿ ಹಬ್ಬುವ ಕೆಳಗಿನ ಯಾವ ಕಾಯಿಲೆಗಳನ್ನು ತಡೆಗಟ್ಟಲಾಗುತ್ತದೆ?

1. ಡಿಫ್ತೀರಿಯಾ 2. ಹೆಪಟೈಟಿಸ್-ಬಿ
3. ಪರ್ಟ್ಯುಸಿಸ್ 4. ಟೆಟಾನಸ್
5. ಡೆಂಗ್ಯೂ
6. ಹಿಮೋಫಿಲಸ್ ಇನ್‌ಫ್ಲ್ಯೂಯೆಂಜಾ-ಬಿ

ಆಯ್ಕೆಗಳು :

ಎ) 1, 2, 3, 4 & 5 ಬಿ) 2, 3, 4, 5 & 6
ಸಿ) 1, 2, 3, 4 & 6 ಡಿ) 2, 3, 4 & 6

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
JD Square, 1ನೇ ಮಹಡಿ ಸ್ಟಂದಾ ಆಸ್ಪತ್ರೆ ಎದುರು, ಸುಭಾಷ ರಸ್ತೆ, ಧಾರವಾಡ-580001
ಮೊ-7022471511, 7022473811

63) "ಖುಫ್ರಿ -ಪುಖ್‌ರಾಜ್" (Kufri-Pukhraj) ಕೆಳಗಿನ ಯಾವುದರ ಹೈಬ್ರಿಡ್ ತಳಿಯಾಗಿದೆ?

ಎ) ಅಕ್ಕಿ ಬಿ) ಗೋಧಿ
ಸಿ) ದ್ರಾಕ್ಷಿ ಡಿ) ಆಲೂಗಡ್ಡೆ

64) ಕೆಳಗಿನ ಯಾವ ಸಮಿತಿಯು ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ಅಳವಡಿಕೆಗೆ ಶಿಫಾರಸ್ಸು ಮಾಡಿತು?

ಎ) ಸಂತಾನಂ ಸಮಿತಿ
ಬಿ) ಸರ್ಕಾರಿಯಾ ಸಮಿತಿ
ಸಿ) ಸ್ವರ್ಣಸಿಂಗ್ ಸಮಿತಿ
ಡಿ) ಬಲವಂತರಾಯ್ ಸಮಿತಿ

65) "ಶೂನ್ಯತ್ವ/ ಶೂನ್ಯತಾ" ಸಿದ್ಧಾಂತವನ್ನು ಬೌದ್ಧ ಮುನಿಗಳಲ್ಲಿ ಮೊದಲು ಯಾರು ನೀಡಿದರು?

ಎ) ಬುದ್ಧ ಬಿ) ಅಶ್ವಘೋಷ
ಸಿ) ವಸುಮಿತ್ರ ಡಿ) ಅಸಂಗಾ

66) ಅಶೋಕನ ಶಾಸನಗಳಲ್ಲಿ ದಕ್ಷಿಣ ಭಾರತದ ಕೆಳಗಿನ ಯಾವ ಜನಾಂಗದ ಕುರಿತು ಉಲ್ಲೇಖವಿಲ್ಲ?

ಎ) ಚೋಳರು ಬಿ) ಚೇರರು
ಸಿ) ಪಾಂಡ್ಯರು ಡಿ) ಪಲ್ಲವರು

67) ಭಾರತ ಇತಿಹಾಸದಲ್ಲಿ "ಕಾನೂಂಗೊಸ್" (Kanungos) ಎಂದರೆ ಯಾರು?

ಎ) ಮೊಘಲರ ಸಮಯದಿಂದ ವಂಶದತ್ತವಾಗಿ ಜಾರಿಯಲ್ಲಿದ್ದ ಕಂದಾಯ ಅಧಿಕಾರಿಗಳು.
ಬಿ) ಉಲೆಮಾಗಳ ಸಹಾಯಕರಾಗಿರುವ ಕಾನೂನು ಪಾಲಕರು.
ಸಿ) ಗ್ರಾಮ ಪಂಚಾಯತ್‌ಗಳಲ್ಲಿ ನ್ಯಾಯ ನಿರ್ದೇಶಕರು.
ಡಿ) ಜೀತದಾಳುಗಳು

68) "ಲೀಲಾ ತಿಲಕಮ್" ಕೃತಿಯು ಕೆಳಗಿನ ಯಾವುದಕ್ಕೆ ಸಂಬಂಧಿಸದೆ?

ಎ) ಉಪನಿಷತ್‌ಗಳ ಮೇಲಿನ ವಿಮರ್ಶೆ
ಬಿ) ಚೋಳ ರಾಜನೊಬ್ಬನ ಪ್ರೇಮ ಕಥೆ
ಸಿ) ರಾಷ್ಟ್ರಕೂಟರ ಸಮಯದ ಯುದ್ಧ ಸಂಪ್ರದಾಯಗಳು
ಡಿ) ವ್ಯಾಕರಣ & ಕಾವ್ಯ

69) 1882ರಲ್ಲಿನ ಹಂಟರ್ ಆಯೋಗ ರಚಿತವಾದುದರ ಕಾರಣ?

ಎ) 1861ರ ಕಾಯ್ದೆಯ ಪರಿಶೀಲನೆ
ಬಿ) ಜಲಿಯನ್ ವಾಲಾಬಾಗ್ ದುರಂತದ ತನಿಖೆ
ಸಿ) ಭಾರತದಲ್ಲಿನ ಶಿಕ್ಷಣ ವ್ಯವಸ್ಥೆಯ ಪರಿಶೀಲನೆ
ಡಿ) ಯಾವುದು ಅಲ್ಲ

70) ಕೆಳಗಿನ ಹೇಳಿಕೆಗಳು ಯಾವ ದೇವಸ್ಥಾನವನ್ನು ವರ್ಣಿಸುತ್ತವೆ?

1. ನಾಗರ ಶೈಲಿಯ ವಾಸ್ತುಶಿಲ್ಪ.
2. ಯುನೆಸ್ಕೋ ವಿಶ್ವ ಪಾರಂಪರಿಕ ತಾಣವಾಗಿದೆ.
3. ಚಂದೇಲರಿಂದ ಕ್ರಿ.ಶ. 885–1050ರ ಅವಧಿಯಲ್ಲಿ ನಿರ್ಮಿಸಲ್ಪಟ್ಟಿದೆ.

ಆಯ್ಕೆಗಳು :

ಎ) ಬೃಹದೇಶ್ವರ ದೇವಸ್ಥಾನ
ಬಿ) ಖಜುರಾಹೋ ದೇವಾಲಯಗಳು
ಸಿ) ಕೈಲಾಸನಾಥ ದೇವಸ್ಥಾನ
ಡಿ) ವಿರೂಪಾಕ್ಷ ದೇವಸ್ಥಾನ

71) ಹೈ-ಕೋರ್ಟ್‌ನ ವ್ಯಾಪ್ತಿಯು ಕೆಳಗಿನ ಯಾವುದರ ಆಧಾರದ ಮೇಲೆ ನಿರ್ಧರಿತವಾಗಿರುತ್ತದೆ?

ಎ) ಸರ್ಕಾರದ ಉದ್ದೇಶ
ಬಿ) ನ್ಯಾಯಾಧೀಶರ ಸಂಖ್ಯೆಯ ಮೇಲೆ
ಸಿ) ಲಭ್ಯವಿರುವ ನಿಧಿಯ ಆಧಾರದ ಮೇಲೆ
ಡಿ) ರಾಜ್ಯಗಳ ಸರಹದ್ದಿನ ಮೇಲೆ

72) ಭಾರತದ ಏಕೀಕೃತ ನಿಧಿಯಿಂದ ರಾಜ್ಯಗಳ ಆದಾಯದ ಅನುದಾನದಲ್ಲಿ ಅನುದಾನವನ್ನು ನಿಯಂತ್ರಿಸುವ ತತ್ವಗಳನ್ನು ಯಾವ ಪ್ರಾಧಿಕಾರ ಶಿಫಾರಸ್ಸು ಮಾಡುತ್ತದೆ?

ಎ) ಸಾರ್ವಜನಿಕ ಖಾತೆಗಳ ಸಮಿತಿ
ಬಿ) ಕೇಂದ್ರ ಹಣಕಾಸು ಸಚಿವಾಲಯ
ಸಿ) ಹಣಕಾಸು ಆಯೋಗ
ಡಿ) ಅಂತರ ರಾಜ್ಯ ಸಮಿತಿ

73) ಕೇಂದ್ರ ಬಜೆಟ್‌ನ್ನು ರೂಪಿಸಿ ಸಂಸತ್ತಿಗೆ ಮಂಡನೆ ಮಾಡುವ ಜವಾಬ್ದಾರಿ ಕೆಳಗಿನ ಯಾವುದರದು?

ಎ) ಕಂದಾಯ ಇಲಾಖೆ ಬಿ) ಹಣಕಾಸು ಸೇವೆಗಳ ಇಲಾಖೆ
ಸಿ) ಆರ್ಥಿಕ ವ್ಯವಹಾರಗಳ ಇಲಾಖೆ
ಡಿ) ಕೇಂದ್ರ ಹಣಕಾಸು ಸಚಿವರು

74) ಮುಖ್ಯ ಚುನಾವಣಾ ಆಯುಕ್ತರನ್ನು ಹುದ್ದೆಯಿಂದ ಕೆಳಗಿನ ಯಾರಿಗೆ ಸಮಾನವಾದ ರೀತಿಯಲ್ಲಿ ತೆಗೆದು ಹಾಕಬಹುದು?

ಎ) ಸ್ಪೀಕರ್ ಬಿ) ಡೆಪ್ಯೂಟಿ ಸ್ಪೀಕರ್
ಸಿ) ರಾಜ್ಯಪಾಲರು
ಡಿ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು



Scanned with CamScanner

www.shikarat.com



75) ಭಾರತದ ಸಂವಿಧಾನವು ಈ ಕೆಳಗಿನವರನ್ನು ತೆಗೆದು ಹಾಕುವ ಯಾವುದೇ ಉಪಬಂಧವನ್ನು ಹೊಂದಿಲ್ಲ?
ಎ) ರಾಷ್ಟ್ರಪತಿ ಬಿ) ಉಪರಾಷ್ಟ್ರಪತಿ
ಸಿ) ಭಾರತದ ಮುಖ್ಯ ನ್ಯಾಯಾಧೀಶರು
ಡಿ) ರಾಜ್ಯಪಾಲರು

76) ಕೆಳಗಿನ ಯಾವ ರಾಜ್ಯ ನಿರ್ದೇಶಕ ತತ್ವಗಳಡಿಯ ವಿಧಿಯಾನುಸಾರ ಯೋಜನಾ ಆಯೋಗವನ್ನು ರಚಿಸಲಾಯಿತು?
ಎ) 28ನೇ ವಿಧಿ ಬಿ) 39ನೇ ವಿಧಿ
ಸಿ) 35ನೇ ವಿಧಿ ಡಿ) 42ನೇ ವಿಧಿ

77) ಹೊಂದಿಸಿ ಬರೆಯಿರಿ.

| 1 | 2 |
|---|---|
| P. ಗಣಿತಸಾರ ಸಂಗ್ರಹ | 1. ಕೀರ್ತಿವರ್ಮ |
| Q. ಸಿದ್ಧಾಂತ ಶಿರೋಮಣಿ | 2. ಮಂಗರಸ |
| R. ಖಗೇಂದ್ರಮಣಿ ದರ್ಪಣ | 3. ಮಹಾವೀರಾಚಾರ್ಯ |
| S. ಗೋ ವೈದ್ಯ ವಿಜ್ಞಾನ | 4. 2ನೇ ಭಾಸ್ಕರಾಚಾರ್ಯ |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 4 | 3 | 2 | 1 |
| ಬಿ) | 2 | 3 | 1 | 4 |
| ಸಿ) | 3 | 4 | 2 | 1 |
| ಡಿ) | 3 | 1 | 2 | 4 |

78) ಹೊಂದಿಸಿ ಬರೆಯಿರಿ.

| 1 | 2 |
|---|---|
| P. ರಾಜಗೃಹ | 1. ಮಹಾಕಶ್ಯಪ |
| Q. ವೈಶಾಲಿ | 2. ಸಭಾಕಾಮಿ |
| R. ಪಾಟಲೀಪುತ್ರ | 3. ಮುಗ್ಗಲೀಪುತ್ರ |
| S. ಕುಂಡಲೀವನ | 4. ವಸುಮಿತ್ರ |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 1 | 2 | 3 | 4 |
| ಬಿ) | 4 | 3 | 2 | 1 |
| ಸಿ) | 3 | 4 | 2 | 1 |
| ಡಿ) | 2 | 4 | 1 | 3 |

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಟಂದಾ ...
ಸಪ್ತಾಪುರ ಬಾವಿ, ಧಾರವಾಡ-580001
ಮೊ: 7022471511, 7022473611

79) 2022ರ 57ನೇ ಜ್ಞಾನಪೀಠ ಪ್ರಶಸ್ತಿಯು ಯಾವ ಭಾಷೆಗೆ ದೊರೆತಿದೆ?
ಎ) ಅಸ್ಸಾಮಿ ಬಿ) ಕೊಂಕಣಿ
ಸಿ) ತುಳು ಡಿ) ಬಂಗಾಳಿ

80) ನಗರ-ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ -ಉಪಾಧ್ಯಕ್ಷರ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಯಾರು ಮತದಾನ ಮಾಡುವ ಹಕ್ಕು ಹೊಂದಿಲ್ಲ ಎಂದು ಇತ್ತೀಚೆಗೆ ಹೈಕೋರ್ಟ್ ಆದೇಶಿಸಿದೆ?
ಎ) ಎಂಎಲ್ಎ ಬಿ) ಎಂಎಲ್‌ಸಿ
ಸಿ) ಎಂಪಿ ಡಿ) ನಾಮನಿರ್ದೇಶಿತ ಸದಸ್ಯರು

81) ನಿವೃತ್ತ ನ್ಯಾ. ಬಿ.ಸುದರ್ಶನ ರೆಡ್ಡಿ ಸಮಿತಿ ರಚಿತವಾಗಿದ್ದು?
ಎ) ಪಿಎಸ್‌ಐ ಅಕ್ರಮ ನೇಮಕ ತನಿಖೆಗೆ
ಬಿ) ಗಣಿಗಾರಿಕೆ ಬಾಧಿತ ಜಿಲ್ಲೆಗಳ ಪುನರುತ್ಥಾನಕ್ಕೆ
ಸಿ) ಹುಬ್ಬಳ್ಳಿ ಗಲಭೆ ಕುರಿತ ತನಿಖೆಗೆ
ಡಿ) ಆಜಾನ್ ಕುರಿತ ತನಿಖೆಗೆ

82) 2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ – ಡಾ. ರಾಜ್‌ಕುಮಾರ ಪ್ರಶಸ್ತಿಗೆ ಯಾರು ಪಾತ್ರರಾಗಿದ್ದಾರೆ?
ಎ) ಎಸ್. ನಾರಾಯಣ ಬಿ) ಪ್ರಶಾಂತ್ ನೀಲ್
ಸಿ) ನಟಿ. ಲಕ್ಷ್ಮಿ ಡಿ) ಜಯಂತಿ

83) ಭಾರತದಲ್ಲಿ 2011–21 ರ ಮಧ್ಯೆ ಹೆಚ್‌ಐವಿ ಪೀಡಿತರ ಸಂಖ್ಯೆಯಲ್ಲಿ ಮೊದಲು ಸ್ಥಾನದಲ್ಲಿರುವ ರಾಜ್ಯ ಯಾವುದು?
ಎ) ಆಂಧ್ರ ಪ್ರದೇಶ ಬಿ) ಮಹಾರಾಷ್ಟ್ರ
ಸಿ) ಕರ್ನಾಟಕ ಡಿ) ಉತ್ತರ ಪ್ರದೇಶ

84) ಸಿಂಗಾಪುರದಲ್ಲಿ ಇತ್ತೀಚೆಗೆ ಯಾವ ಭಾಷೆಯ ಕುರಿತು ಒಂದು ತಿಂಗಳ ಕಾಲ ಉತ್ಸವ ಹಮ್ಮಿಕೊಳ್ಳಲಾಗಿದೆ?
ಎ) ಇಂಗ್ಲೀಷ್ ಬಿ) ಚೀನಿ
ಸಿ) ತಮಿಳು ಡಿ) ಸ್ಪೇನಿಷ್

85) ಇತ್ತೀಚೆಗೆ ಉದ್ಘಾಟನೆಯಾದ ಇ-ಉದ್ಭವಂ ಪ್ಲಾಟ್‌ಫಾರಂ ಕರ್ನಾಟಕ ಸರ್ಕಾರದ ಯಾವ ಇಲಾಖೆಗೆ ಸಂಬಂಧಿಸಿದೆ?
ಎ) ಮುಜರಾಯಿ ಬಿ) ಸಮಾಜ ಕಲ್ಯಾಣ
ಸಿ) ಆರೋಗ್ಯ ಡಿ) ಕಂದಾಯ

86) ಇತ್ತೀಚೆಗೆ ಪ್ರಧಾನಿ ಮೋದಿಯವರು ಯಾವ ಗ್ರಾಮ ಪಂಚಾಯಿತಿಯನ್ನು "ದೇಶದ ಮೊದಲ ಇಂಗಾಲ ತಟಸ್ಥ ಪಂಚಾಯಿತಿ" ಎಂದು ಘೋಷಿಸಿದರು?
ಎ) ಅರಾತ್ ಬಿ) ಪಲ್ಲಿ
ಸಿ) ಬಂದೇಬಾಗ್ ಡಿ) ಬೋದನ್

87) ಟ್ವಿಟರ್ – ಸಾಮಾಜಿಕ ಜಾಲತಾಣವನ್ನು ಇತ್ತೀಚೆಗೆ 44 ಬಿಲಿಯನ್ ಡಾಲರ್‌ಗೆ ಯಾರು ಖರೀದಿಸಿದ್ದಾರೆ?
ಎ) ಅದಾನಿ ಬಿ) ಅಂಬಾನಿ
ಸಿ) ಬಿಲ್‌ಗೇಟ್ಸ್ ಡಿ) ಎಲಾನ್ ಮಸ್ಕ್

88) 2022ರ ವಿಶ್ವ ಪುಸ್ತಕ ರಾಜಧಾನಿಯನ್ನಾಗಿ ಯುನೆಸ್ಕೋ ಯಾವ ನಗರವನ್ನು ಘೋಷಿಸಿದೆ?
ಎ) ಗ್ವಾಡಲಜರಾ ಬಿ) ನ್ಯೂಯಾರ್ಕ್
ಸಿ) ದೆಹಲಿ ಡಿ) ಗ್ವಾಡೆಮಾನ್

89) "India Out" ಅಭಿಯಾನವು ಯಾವ ದೇಶದಲ್ಲಿ ಅರಂಭವಾಗಿದೆ?
ಎ) ಚೀನಾ ಬಿ) ಪಾಕಿಸ್ತಾನ
ಸಿ) ಶ್ರೀಲಂಕಾ ಡಿ) ಮಾಲ್ಡೀವ್ಸ್



Scanned with CamScanner

www.shikarat.com



90) ಎರಡು ಸಂಖ್ಯೆಗಳ ಅನುಪಾತ 2 : 3 ಇದೆ. ಆ ಎರಡು ಸಂಖ್ಯೆಗಳಿಂದ 12 ನ್ನು ಕಳೆದಾಗ ಅವುಗಳ ಅನುಪಾತ 5 : 8 ಆಗುವುದು. ಹಾಗಾದರೆ ಆ ಎರಡು ಸಂಖ್ಯೆಗಳು ಯಾವುವು?

ಎ) 16 & 24  ಬಿ) 35 & 56
ಸಿ) 20 & 48  ಡಿ) 72 & 108

91) ರಾಮನು ಒಂದು ಭಾವ ಚಿತ್ರವನ್ನು ತೋರಿಸುತ್ತಾ ಹೀಗೆ ಹೇಳಿದನು. ಈ ಹುಡುಗಿ ನನ್ನ ತಾಯಿಯ ಮೊಮ್ಮಗನ ಪತ್ನಿ. ಹಾಗಾದರೆ ರಾಮನು ಆ ಹುಡುಗಿಗೆ ಏನಾಗಬೇಕು?

ಎ) ಪತಿ  ಬಿ) ಅಜ್ಜ
ಸಿ) ತಂದೆ  ಡಿ) ಮಾವ

92) ರಾಜು ಎರಡು ಲ್ಯಾಪ್‌ಟಾಪ್ ಖರೀದಿಸಿದ್ದಾನೆ. ಮೊದಲನೆಯದನ್ನು 42, 500 ರೂ. ಮಾರಿ ಅದರ ಮೇಲೆ ಶೇ. 12 ರಷ್ಟು ಲಾಭಗಳಿಸಿದನು. ಇನ್ನೊಂದನ್ನು 36, 200 ರೂ. ಮಾರಿ ಅದರ ಮೇಲೆ ಶೇ. 12 ರಷ್ಟು ನಷ್ಟ ಅನುಭವಿಸಿದನು. ಹಾಗಾದರೆ ರಾಜುವಿಗೆ ಒಟ್ಟಾರೆ ಈ ವ್ಯವಹಾರದಲ್ಲಿ ಆದ ಲಾಭ ಅಥವಾ ನಷ್ಟ ಎಷ್ಟು?

ಎ) ರೂ. 756 ಲಾಭ
ಬಿ) ರೂ. 756 ನಷ್ಟ
ಸಿ) ರೂ. 1,512 ಲಾಭ
ಡಿ) ರೂ. 1,512 ನಷ್ಟ

93) ಒಂದು ಅಸಲು ಸರಳ ಬಡ್ಡಿಯಲ್ಲಿ ನಿರ್ದಿಷ್ಟ ದರದಲ್ಲಿ 3 ವರ್ಷಗಳಿಗೆ 850 ರೂ. ಮತ್ತು 4 ವರ್ಷಗಳಿಗೆ 925 ರೂ. ಆಗುತ್ತದೆ. ಹಾಗಾದರೆ ಅಸಲು ಎಷ್ಟು?

ಎ) 700 ರೂ.
ಬಿ) 850 ರೂ.
ಸಿ) 925 ರೂ.
ಡಿ) 625 ರೂ.

94) ಎರಡು ಸಂಖ್ಯೆಗಳ ಮೊತ್ತ 20 ಇದೆ ಮತ್ತು ಅವುಗಳ ವ್ಯತ್ಯಾಸ 2.5 ಇದೆ. ಹಾಗಾದರೆ ಈ ಎರಡು ಸಂಖ್ಯೆಗಳ ಅನುಪಾತವೇನು?

ಎ) 9:7  ಬಿ) 3:5
ಸಿ) 2:7  ಡಿ) 5:7

95) ಒಂದು ಸಂಖ್ಯೆಯನ್ನು ಮೊದಲು ಶೇ. 20 ಕ್ಕೆ ಕಡಿಮೆಗೊಳಿಸಿದ ನಂತರ ಮತ್ತೆ ಶೇ. 15 ರಷ್ಟು ಹೆಚ್ಚಳ ಮಾಡಲಾಗಿದೆ. ಈ ರೀತಿ ಮಾಡಿದಾಗ ಮೂಲ ಸಂಖ್ಯೆಗಿಂತ 64 ಕಡಿಮೆಯಾಗುವುದು. ಹಾಗಾದರೆ ಆ ಮೂಲ ಸಂಖ್ಯೆ ಯಾವುದು?

ಎ) 600  ಬಿ) 850
ಸಿ) 800  ಡಿ) 700

96) ಸಮರ್ಥ್ ಮತ್ತು ಶರಣು ಒಂದು ವ್ಯಾಪಾರವನ್ನು ಪ್ರಾರಂಭಿಸುತ್ತಾರೆ. ಅವರಲ್ಲಿ ಸಮರ್ಥ್ 15,000 ರೂ. ಗಳನ್ನು 4 ತಿಂಗಳವರೆಗೆ ಮತ್ತು ಶರಣು 10,000 ರೂ. ಗಳನ್ನು 3 ತಿಂಗಳವರೆಗೆ ಹೂಡಿಕೆ ಮಾಡುತ್ತಾರೆ. ನಂತರ ಅವರಿಗೆ ಒಟ್ಟಾರೆ 90,000 ರೂ ಲಾಭವಾದರೆ ಲಾಭದಲ್ಲಿ ಸಮರ್ಥ್‌ನ ಪಾಲು ಎಷ್ಟು?

ಎ) 35,000  ಬಿ) 75,000
ಸಿ) 55,000  ಡಿ) 60,000

97) ಗಡಿಯಾರದ 4 ಗಂಟೆ ಮತ್ತು 5 ಗಂಟೆಯ ಸಮಯದಲ್ಲಿ ಗಂಟೆಯ ಮುಳ್ಳು ಮತ್ತು ನಿಮಿಷದ ಮುಳ್ಳು ಯಾವ ಸಮಯದಲ್ಲಿ ಸರಳ ರೇಖೆಯಲ್ಲಿರುತ್ತವೆ?

ಎ) 4 ಗಂ. 50 ನಿಮಿಷ
ಬಿ) 4 ಗಂ. 50 1/11 ನಿಮಿಷ
ಸಿ) 4 ಗಂ. 52 4/11 ನಿಮಿಷ
ಡಿ) 4 ಗಂ. 54 6/11 ನಿಮಿಷ

98) ಒಂದು ಶಾಲೆಯಲ್ಲಿ ವಿದ್ಯಾರ್ಥಿ & ಶಿಕ್ಷಕರ ಒಟ್ಟು ಸಂಖ್ಯೆ 1,200 ಇದೆ. ಇವರುಗಳಲ್ಲಿ ಶಾಲಾ ಪ್ರವಾಸ ಕೈಗೊಂಡಿರುವ 15 ವಿದ್ಯಾರ್ಥಿಗಳ ಗುಂಪಿಗೆ ಒಬ್ಬ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಹಾಗಾದರೆ ಈ ಶಾಲೆಯಲ್ಲಿರುವ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು?

ಎ) 70  ಬಿ) 75
ಸಿ) 80  ಡಿ) 85

99) ಒಂದು ಬುಟ್ಟಿಯಲ್ಲಿ 5 ಕೆಂಪು, 6 ಕಪ್ಪು & 5 ನೀಲಿ ಬಣ್ಣದ ಬಾಲ್‌ಗಳಿವೆ. ಇದರಲ್ಲಿ 4 ಬಣ್ಣಗಳನ್ನು ಯಾದೃಚ್ಛಿಕವಾಗಿ ತೆಗೆದಾಗ ಅವುಗಳಲ್ಲಿ ಒಂದು ಕೆಂಪು, 2 ಕಪ್ಪು & 1 ನೀಲಿ ಬಣ್ಣ ಬರುವ ಸಾಧ್ಯತೆಗಳೆಷ್ಟು?

ಎ) 75/362  ಬಿ) 75/364
ಸಿ) 71/362  ಡಿ) 70/363

100) ಒಬ್ಬ ವ್ಯಕ್ತಿಯು 40 ಕಿ.ಮೀ. ದೂರ ಹೋಗಲು ನಿರ್ಧರಿಸಿದ್ದಾನೆ. ಅದರಲ್ಲಿ ಅವನು 16 ಕಿ.ಮೀ. ದೂರವನ್ನು ಬೈಕ್‌ನೊಂದಿಗೆ ಮತ್ತು ಉಳಿದ ದೂರವನ್ನು ಟಾಂಗಾದಲ್ಲಿ ಚಲಿಸುತ್ತಾನೆ. ಒಂದು ವೇಳೆ ಅವನು 16 ಕಿ.ಮೀ. ದೂರವನ್ನು ಟಾಂಗಾದಲ್ಲಿ ಮತ್ತು ಉಳಿದ ದೂರವನ್ನು 4 ಕಿ.ಮೀ. / ಗಂ. ವೇಗದಲ್ಲಿ ಚಲಿಸುತ್ತಾನೆ. ಅವನಿಗೆ 1 ಗಂಟೆ ಹೆಚ್ಚಿನ ಸಮಯ ಬೇಕಾಗುತ್ತದೆ. ಹಾಗಾದರೆ ಟಾಂಗಾದ ವೇಗವೆಷ್ಟು?

ಎ) 12 ಕಿ.ಮೀ.ಗಂ  ಬಿ) 8 ಕಿ.ಮೀ..ಗಂ
ಸಿ) 16 ಕಿ.ಮೀ./ಗಂ  ಡಿ) 10 ಕಿ.ಮೀ./ಗಂ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಭಾವಿ, ಧಾರವಾಡ-580001
ಮೊ: 7022471511, 7022473611



Scanned with CamScanner